2017 ಕ.ತೀ.ವ. 1055

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಆನಂದ್ ಬೈರಾರೆಡ್ಡಿ

## ಉಮೇಶ ಮತ್ತು ಮತ್ತೊಬ್ಬರು –ವಿರುದ್ಧ– ಕರ್ನಾಟಕ ರಾಜ್ಯ (ಎಚ್.ಡಿ. ಕೋಟೆ ಪೊಲೀಸ್‌ರವರಿಂದ ಪ್ರತಿನಿಧಿತ)*

ಕ್ರಿಮಿನಲ್ ಪ್ರಕ್ರಿಯಾ ಸಂಹಿತೆ, 1973ರ 374(2) ನೇ ಪ್ರಕರಣದ ಮೇರೆಗಿನ ಕ್ರಿಮಿನಲ್ ಅಪೀಲು.

ಭಾರತೀಯ ದಂಡ ಸಂಹಿತೆಯ 306ನೇ ಪ್ರಕರಣ.

ಇಲ್ಲಿನ ಅಪೀಲುದಾರನು ಸಣ್ಣಮಾರಮ್ಮಳನ್ನು ಪ್ರೀತಿಸಿ, ಲೈಂಗಿಕವಾಗಿ ಬಳಸಿಕೊಂಡು ಆಕೆ ಗರ್ಭಿಣಿಯಾದ ತರುವಾಯ ಮದುವೆಯಾಗುತ್ತೇನೆಂದು ಮಾತುಕೊಟ್ಟು ತಪ್ಪಿಸಿಕೊಳ್ಳುತ್ತಾನೆ. ಸಣ್ಣಮಾರಮ್ಮಳು ತನ್ನ ತವರನ್ನು ತೊರೆದು ಅಪೀಲುದಾರನ ಮನೆಯ ವರಾಂಡದಲ್ಲಿ ತನ್ನ ಮುದುವೆಯಾಗುವವರೆಗೂ ಹೋಗುವುದಿಲ್ಲವೆಂದು ವಾಸಿಸತೊಡಗುತ್ತಾಳೆ. ಅಪೀಲುದಾರನು ಕಾಣೆಯಾಗಿರುವುದರಿಂದ ಹಾಗೂ ಆಕೆಯು ಅಲ್ಲಿ ಇರುವುದರಿಂದ ಕುಪಿತಗೊಂಡ ಆಪಾದಿತ ಸಂ. 2–10 ಇವರು ಆಕೆಯನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿ ಆಕೆಯುನ್ನು ಹೊರಗೆಡಹುತ್ತಾರೆ. ಇದರಿಂದ ಮನನೊಂದು ಆಕೆಯು ನೇಣುಬಿಗಿದು ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ಪಿರ್ಯಾದು ದಾಖಲಾದ ಮೇಲೆ ಆಪಾದಿತ/ಅಪೀಲುದಾರನಿಗೆ ಭಾರತೀಯ ದಂಡ ಸಂಹಿತೆಯ 34ನೇ ಪ್ರಕರಣದೊಂದಿಗೆ ಓದಲಾದಂತೆ 306ನೇ ಪ್ರಕರಣದಡಿಯಲ್ಲಿ ಆಪಾದನೆಗಳಿಗಾಗಿ ಆರೋಪ ಹೊರಿಸಲಾಗುತ್ತದೆ. ಕೆಳ ನ್ಯಾಯಾಲಯವು ಇದನ್ನು ಅನುಸರಿಸಿ ಶಿಕ್ಷೆ ವಿಧಿಸುತ್ತದೆ. ಇದನ್ನು ಪ್ರಶ್ನಿಸಿ ಪ್ರಸ್ತುತ ಅಪೀಲನ್ನು ಸಲ್ಲಿಸಲಾಗಿದೆ.

* ಕ್ರಿಮಿನಲ್ ಅಪೀಲು ಸಂ.972/2009, ದಿನಾಂಕ: 5ನೇ ನವೆಂಬರ್, 2014.

ಆಪಾದಿತನ ಪರ ವಕೀಲರು ಆಪಾದಿತ ಅಪರಾಧವನ್ನು ಅಪೀಲುದಾರನ ಮೇಲೆ ಹೊರಿಸಿರುವುದು. ಭಾರತೀಯ ದಂಡ ಸಂಹಿತೆಯ 306ನೇ ಪ್ರಕರಣದ ವ್ಯಾಪ್ತಿಗೆ ಬರುವುದಿಲ್ಲವೆಂದು ನಿವೇದಿಸಿ ಅನೇಕ ಮೊಕದ್ದಮೆಗಳನ್ನು ಉದಾಹರಿಸಿದ್ದಾರೆ.

ಮತ್ತೊಂದು ಕಡೆ, ಈ ಪ್ರಕರಣದಲ್ಲಿ ಅಧಿವಿಚಾರಣಾ ನ್ಯಾಯಾಲಯವು ಸದರಿ ನಿರ್ಣಯವನ್ನು ಅನ್ವಯಿಸಿದ್ದು ಈ ಪ್ರಕರಣವು ಸದೃಶವಾದ ದೃಷ್ಟಿಕೋನವನ್ನು ತಳೆಯಲಾಗಿದೆಯೆಂದು ಅಭಿಪ್ರಾಯಪಟ್ಟಿದ್ದು, ಮತ್ತೊಂದು ಕಡೆ ಮೇಲೆ ಉದ್ಧೃತಗೊಳಿಸಲಾದ ಎಲ್ಲಾ ನಿರ್ಣಯಗಳನ್ನು ನಿರ್ಲಕ್ಷಿಸುವುದು ಅಗತ್ಯವಾಗಿದೆಯೆಂದು ಅಭಿಪ್ರಾಯಪಟ್ಟು, ಉಚ್ಚ ನ್ಯಾಯಾಲಯವು ಪ್ರಸ್ತುತ ಅಪೀಲನ್ನು ಅಂಗೀಕರಿಸಿ ಕೆಳ ನ್ಯಾಯಾಲಯದ ಶಿಕ್ಷೆಯ ತೀರ್ಪನ್ನು ವಜಾಗೊಳಿಸಿ ಆಪಾದಿತನನ್ನು ಖುಲಾಸೆಗೊಳಿಸಿದೆ.

| *ಉಲ್ಲೇಖಿಸಲಾದ ಮೊಕದ್ದಮೆಗಳು:* | *ಪ್ಯಾರಾಗಳಲ್ಲಿ* |
|---|---|
| *1. 2009 (3) ಕ್ರೈಮ್ಸ್ 35(ಎಸ್‌ಸಿ)*<br>*ದಮ್ಮು ಶ್ರೀನು –ವಿರುದ್ಧ– ಆಂಧ್ರ ಪ್ರದೇಶ ರಾಜ್ಯ* | *(ಉಲ್ಲೇ) 5* |
| *2. 1995 ಪೂರಕ (3) ಎಸ್‌ಸಿಸಿ 438*<br>*ಸ್ವಾಮಿ ಪ್ರಹ್ಲಾದ್ ದಾಸ್ –ವಿರುದ್ಧ–*<br>*ಮಧ್ಯ ಪ್ರದೇಶ ರಾಜ್ಯ* | *(ಉಲ್ಲೇ) 6* |
| *3. 1995 ಪೂರಕ (3) ಎಸ್‌ಸಿಸಿ 731*<br>*ಮಹೇಂದ್ರ ಸಿಂಗ್ –ವಿರುದ್ಧ– ಮಧ್ಯ ಪ್ರದೇಶ ರಾಜ್ಯ* | *(ಉಲ್ಲೇ) 6* |
| *4. (2001) 9 ಎಸ್‌ಸಿಸಿ 618*<br>*ಕುಮಾರ್ –ವಿರುದ್ಧ– ರಮೇಶ್, ಛತ್ತೀಸ್‌ಗಢ ರಾಜ್ಯ* | *(ಉಲ್ಲೇ) 6* |
| *5. ಎಐಆರ್ 2002 ಎಸ್‌ಸಿ 1998*<br>*ಸಂಜು ಅಲಿಯಾಸ್ ಸಂಜಯ್ ಸಿಂಗ್ ಸೆಂಗರ್*<br>*–ವಿರುದ್ಧ– ಮಧ್ಯ ಪ್ರದೇಶ* | *(ಉಲ್ಲೇ) 6* |

6. *2009(11) ಎಸ್‌ಸಿಎಎಲ್‌ಇ 24*
*ಚಿತ್ರೇಶ್ ಕುಮಾರ್ ಚೋಪ್ರಾ –ವಿರುದ್ಧ–*
*ದೆಹಲಿಯ ಕೇಂದ್ರಾಡಳಿತ ರಾಜ್ಯ* *(ಉಲ್ಲೇ) 6*
7. *2010 ಎಐಆರ್ ಎಸ್‌ಸಿಡಬ್ಲ್ಯೂ 337*
*ಗಂಗೂಲ ಮೋಹನ್ ರೆಡ್ಡಿ –ವಿರುದ್ಧ–*
*ಆಂಧ್ರ ಪ್ರದೇಶ ರಾಜ್ಯ* *(ಉಲ್ಲೇ) 6*

ಅಪೀಲುದಾರರ ಪರವಾಗಿ : ಶ್ರೀ ಎ.ಎನ್. ರಾಧಾಕೃಷ್ಣ, ವಕೀಲರು.
ಪ್ರತ್ಯಪೀಲುದಾರರ ಪರವಾಗಿ : ಶ್ರೀ ಕೆ.ಆರ್. ಕೇಶವಮೂರ್ತಿ, ರಾಜ್ಯ ಅಭಿಯೋಜಕರು.

## ತೀರ್ಪು

**ನ್ಯಾಯಮೂರ್ತಿ ಆನಂದ್ ಬೈರಾರೆಡ್ಡಿ:**

ಅಪೀಲುದಾರರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರು ಮತ್ತು ರಾಜ್ಯ ಪಬ್ಲಿಕ್ ಪ್ರಾಸಿಕ್ಯೂಟರ್‌ರವರ ವಾದವನ್ನು ಆಲಿಸಲಾಗಿದೆ.

2. ಪ್ರಾಸಿಕ್ಯೂಷನ್‌ರವರ ವಾದವೇನಾಗಿತ್ತೆಂದರೆ: 1ನೇ ಸಂಖ್ಯೆ ಆಪಾದಿತನು, ದೂರುದಾರನ ಸಹೋದರಿ ಸಣ್ಣಮಾರಮ್ಮನನ್ನು ಪ್ರೀತಿಸುತ್ತಿದ್ದ ಮತ್ತು ತಾನು ಅವಳನ್ನು ಮದುವೆಯಾಗುವುದಾಗಿ ಭರವಸೆ ನೀಡಿದ್ದು, ಸ್ವಲ್ಪ ಅವಧಿಯ ನಂತರ ಅವನು ಅವಳೊಂದಿಗೆ ಲೈಂಗಿಕ ಸಂಪರ್ಕ ಹೊಂದಿದ್ದನೆಂದು ಅವಳು ಮಗುವಿಗೆ ತಾಯಿಯಾಗಿದ್ದಳೆಂದು ಹೇಳಲಾಗಿತ್ತೆಂಬುದುದಾಗಿದೆ. ಇದನ್ನು ಸಣ್ಣಮಾರಮ್ಮನು ತನ್ನ ಅತ್ತಿಗೆಗೆ ವಿವರಿಸಿದಾಗ, ಅವಳು ಸಣ್ಣಮಾರಮ್ಮನನ್ನು ಮೈಸೂರಿನಲ್ಲಿರುವ ಚೆಲುವಾಂಬ ಆಸ್ಪತ್ರೆಗೆ ಕೊಂಡೊಯ್ದು, ಅವಳನ್ನು ಪರೀಕ್ಷೆಗೊಳಪಡಿಸಿದಾಗ ಅವಳು ಸುಮಾರು ಆರು ತಿಂಗಳ ಗರ್ಭಿಣಿಯಾಗಿದ್ದಳೆಂಬುದು ದೃಢವಾಗಿತ್ತು. ಪ್ರಾಸಾ.10 ಅತ್ತಿಗೆಯು ಪ್ರಾ.ಸಾ.22 ಮತ್ತು ಮೃತ ಸಣ್ಣಮಾರಮ್ಮನ ಸಹೋದರನಾಗಿದ್ದ

ಪ್ರಾಸಾ.1 ದೂರುದಾರನಾಗಿರುವ ಅವಳ ಗಂಡನಿಗೆ ತಿಳಿಸಿದ್ದಾಳೆ. ಅವರು ಗ್ರಾಮದ ಮುಖ್ಯಸ್ಥರನ್ನು ಭೇಟಿ ಮಾಡಿ ಸನ್ನಿವೇಶಗಳನ್ನು ತಿಳಿಸಿದ್ದಾರೆ. ಪ್ರತಿಯಾಗಿ, ಅವರು ಹೆಗ್ಗಡದೇವನಕೋಟೆ ಪೊಲೀಸು ಠಾಣೆಗೆ ದೂರು ನೀಡಲು ತಿಳಿಸಿದ್ದು, ಇಲ್ಲಿಗೆ ಆಪಾದಿತ ಸಂ.1– ಅಪೀಲುದಾರ ಸಂ.1ನ್ನು ಇಲ್ಲಿ ಕಳಿಸಿದ್ದರು ಮತ್ತು ಅವನ ತಂದೆ ಮತ್ತು ಗ್ರಾಮದ ಇತರ ಪಂಚರು, ಸದರಿ ಸಭೆಯಲ್ಲಿ ಆಪಾದಿತ ಸಂ.1ನ್ನು ಸಣ್ಣಮಾರಮ್ಮನನ್ನು ಮದುವೆಯಾಗಲು ಒಪ್ಪಿಸಿದ್ದು, ಇದಕ್ಕೆ ಅವರು 15 ದಿನಗಳ ಕಾಲಾವಕಾಶವನ್ನು ಕೋರಿದ್ದಾರೆ. ಆದಾಗ್ಯೂ, ಆಪಾದಿತ ಸಂ.1ರ ತಂದೆಯು, ಮೃತರೊಂದಿಗೆ ಆಪಾದಿತನು ವಿವಾಹವಾಗಲು ಅನುಮತಿಸಿರಲಿಲ್ಲವೆಂದು, ಅವನನ್ನು ಮೈಸೂರಿನಲ್ಲಿರುವ ಆಸ್ಪತ್ರೆಗೆ ದಾಖಲು ಮಾಡಲಾಗಿತ್ತೆಂದು ಕ್ಲೇಮು ಮಾಡಲಾಗಿತ್ತು. ಗ್ರಾಮದ ಹಿರಿಯರು ಎಂದರೆ ಪ್ರಾಸಾ.1, 8 ಮತ್ತು 22 ಮತ್ತು ಇತರರು, ಮೈಸೂರಿನಲ್ಲಿರುವ ಆಸ್ಪತ್ರೆಯಲ್ಲಿ ಆಪಾದಿತ ಸಂ.1ರ ತಂದೆಯನ್ನು ಭೇಟಿ ಮಾಡಿದ್ದು, ಮದುವೆಗೆ ಸಿದ್ಧತೆ ಮಾಡಲು ಮತ್ತೆ ಕೋರಿಕೊಂಡಿದ್ದರು. ಆಪಾದಿತ ಸಂ.1 ಗ್ರಾಮದಲ್ಲಿಲ್ಲವೆಂದು ಮತ್ತು ಅವನು ಗ್ರಾಮಕ್ಕೆ ಹಿಂತಿರುಗಿದ ನಂತರ ವಿವಾಹದ ಸಿದ್ಧತೆ ನಡೆಸಬೇಕೆಂದು ಅವರು ಹೇಳಿದ್ದರು. ಈ ನಡುವಿನ ಅವಧಿಯಲ್ಲಿ, ಸಣ್ಣಮಾರಮ್ಮನು, ಆಪಾದಿತ ಮತ್ತು ಅವರ ಕುಟುಂಬ ತನ್ನನ್ನು ತ್ಯಜಿಸಿರುವರೆಂದು ಭಯಪಟ್ಟಿದ್ದು, ಆದುದರಿಂದ ಅಂಥ ತ್ಯಜಿಸುವಿಕೆಯನ್ನು ತಡೆಯಲು ಮನೆಯಿಂದ ಕಾಲು ತೆಗೆದು 1ನೇ ಆಪಾದಿತನ ಮನೆಗೆ ಹೋಗಿ ನೆಲೆಸಲು ನಿರ್ಧರಿಸಿದ್ದಾಳೆ ಮತ್ತು ಚಾಮಳ್ಳಿ ಗ್ರಾಮದ ಚಿಕ್ಕನಂದಿಯಲ್ಲಿ ಆಪಾದಿತ ಸಂ.1ರ ವರಾಂಡದಲ್ಲಿ ಉಳಿದುಕೊಂಡಿದ್ದಳು. 1ನೇ ಆಪಾದಿತನು ಸಂಪರ್ಕದಲ್ಲಿಲ್ಲದಿರುವ ಕಾರ್ಯವನ್ನು ಮುಂದುವರೆಸಿದ್ದು, ಗ್ರಾಮಕ್ಕೆ ಹಿಂದಿರುಗಿರಲಿಲ್ಲ. 2 ರಿಂದ 10ರ ವರೆಗಿನ ಆಪಾದಿತರು, ಮತ್ತೊಂದು ಕಡೆ, ತಮ್ಮ ಮನೆಗೆ ಬಂದಿರುವ ಮತ್ತು ವರಾಂಡದಲ್ಲಿ ಉಳಿದುಕೊಳ್ಳಲು ಕೋರಿಕೊಂಡ ಸಣ್ಣಮಾರಮ್ಮನಿಗೆ ಬಲವಾದ ಆಕ್ಷೇಪಣೆ ವ್ಯಕ್ತಪಡಿಸಿದ್ದು, ಅವರು ಅವಳನ್ನು ನಿಂದಿಸಿ ಮನೆಯಿಂದ ಹೊರಗೆಸೆದಿದ್ದಾರೆ. ಅಲ್ಲದೆ, ನಿರ್ದಿಷ್ಟವಾಗಿ, 4ನೇ ಆಪಾದಿತರು, ಹೊಲಸು ಮಾತಿನಲ್ಲಿ, ತೀಕ್ಷ್ಣವಾಗಿ ನಿಂದಿಸಿದ್ದು, ಅವಳನ್ನು ಥಳಿಸಿದ್ದಾರೆ ಮತ್ತು ತಮಗೆ ತೊಂದರೆ ಮಾಡುವುದನ್ನು ಮುಂದುವರೆಸಿದರೆ ಜೀವ ತೆಗೆಯುವುದಾಗಿ ಬೆದರಿಸಿದ್ದಾರೆ. ಈ ವರ್ತನೆಯಿಂದ ಅವಳು

ತಡೆದುಕೊಳ್ಳಲಾಗದ ಅವಮಾನಕೊಳ್ಳಗಾಗಿದ್ದಾಳೆ, ಆದುದರಿಂದ 4.5.2006ರ ನಡುರಾತ್ರಿಯಲ್ಲಿ ಅವಳು, ಆಪಾದಿತ ಸಂ.1ರ ಮನೆಯ ವರಾಂಡದಲ್ಲಿ ತಾನೇ ನೇಣು ಹಾಕಿಕೊಂಡಿದ್ದು, ಬೆಳಗಿನ ಜಾವ ಇದು ಗಮನಕ್ಕೆ ಬಂದಿದ್ದು, ತದನಂತರ ದೂರನ್ನು ದಾಖಲಿಸಲಾಗಿತ್ತು ಮತ್ತು ಹೆಚ್ಚಿನ ವ್ಯವಹರಣೆಗಳನ್ನು ಪ್ರಾರಂಭಿಸಲಾಗಿತ್ತು. ಭಾರತೀಯ ದಂಡ ಸಂಹಿತೆ, 1860ರ (ಸಂಕ್ಷಿಪ್ತತೆಗಾಗಿ ಇಲ್ಲಿ ಇನ್ನು ಮುಂದೆ 'ಭಾರತೀಯ ದಂಡ ಸಂಹಿತೆಯೆಂದು ಉಲ್ಲೇಖಿಸಲಾಗಿದೆ) 34ನೇ ಪ್ರಕರಣದೊಂದಿಗೆ ಓದಲಾದ 306ನೇ ಪ್ರಕರಣದ ಮೇರೆಗೆ ದಂಡಿಸಬಹುದಾದ ಅಪರಾಧಕ್ಕಾಗಿ ಆಪಾದಿತನ ವಿರುದ್ಧ ಆರೋಪಗಳನ್ನು ರೂಪಿಸಲಾಗಿತ್ತು.

3. ಆಪಾದಿತನು ತಾನು ತಪ್ಪಿತಸ್ಥನಲ್ಲವೆಂದು ವಾದಿಸಿದ್ದು ಮತ್ತು ಅಧಿವಿಚಾರಣೆ ನಡೆಸಬೇಕೆಂದು ಕ್ಲೇಮು ಮಾಡಿದ್ದು, ಪ್ರಾಸಿಕ್ಯೂಷನ್ನು 22 ಜನ ಸಾಕ್ಷಿದಾರರನ್ನು ವಿಚಾರಣೆ ನಡೆಸಿದ್ದು, ಮುದ್ದೆಮಾಲು ಹಾಗೂ ಕೆಲವು ದಸ್ತಾವೇಜುಗಳನ್ನು ಗುರುತು ಮಾಡಿದೆ. ದಂಡ ಪ್ರಕ್ರಿಯಾ ಸಂಹಿತೆ 1973ರ 313ನೇ ಪ್ರಕರಣದ ಮೇರೆಗೆ ಆಪಾದಿತನ ಹೇಳಿಕೆಯನ್ನು ದಾಖಲಿಸಿದ ನಂತರ, ನ್ಯಾಯಾಲಯವು, ತನ್ನ ಪರಿಗಣನೆಗಾಗಿ ಈ ಮುಂದಿನ ವಿವಾದಾಂಶಗಳನ್ನು ರೂಪಿಸಿದೆ:

> *"1. 1ನೇ ಆಪಾದಿತನು, ಸಣ್ಣಮಾರಮ್ಮನನ್ನು ಮದುವೆಯಾಗುವುದಾಗಿ ಮೃತ ಸಣ್ಣಮಾರಮ್ಮನಿಗೆ ಭರವಸೆ ನೀಡಿದ್ದು, ಆ ಮೂಲಕ ಅವನು ಅವಳೊಂದಿಗೆ ಲೈಂಗಿಕ ಸಂಪರ್ಕವನ್ನು ನಡೆಸಿ, ತದನುಸಾರವಾಗಿ ಮೃತ ಸಣ್ಣಮಾರಮ್ಮನು ಸುಮಾರು 6 ತಿಂಗಳುಗಳ ಗರ್ಭಿಣಿಯಾಗಿದ್ದು, ತದನಂತರ ಅವಳನ್ನು ಮದುವೆಯಾಗಲು ನಿರಾಕರಿಸಿದ್ದನು ಎಂಬ ಯುಕ್ತ ಸಂದೇಹದ ಮೇಲೆ ಪ್ರಾಸಿಕ್ಯೂಷನ್ನು ರುಜುವಾತು ಪಡಿಸಿದೆಯೇ ಮತ್ತು ಸಣ್ಣಮಾರಮ್ಮನು 1ನೇ ಸಂಖ್ಯೆಯ ಆಪಾದಿತನ ಮನೆಯಲ್ಲಿ ವಾಸಿಸಲು ಹೋಗಿದ್ದಾಗ,*

*1ನೇ ಸಂಖ್ಯೆಯ ಆಪಾದಿತರಿಂದ 10ನೇ ಸಂಖ್ಯೆ ಆಪಾದಿತರು, ಅವಳನ್ನು ನಿಂದಿಸಿ, ಅವರ ಮನೆಯಿಂದ ಹೊರಗೆ ನೂಕಿದಾಗ, 4ನೇ ಸಂಖ್ಯೆಯ ಆಪಾದಿತನು ಅವಳನ್ನು ಥಳಿಸಿ, ಅವಳು ಗರ್ಭಿಣಿಯಾಗಿರುವ ಅದನ್ನು ಹೇಳಿ ತಿಳಿಸಿ ನಿಂದಿಸುವಾಗ, ಸದರಿ ಕೃತ್ಯವನ್ನು ಹೀಯಾಳಿಸುತ್ತಿರುವಾಗ ಮೃತ ಸಣ್ಣಮಾರಮ್ಮನು, 4.3.2006ರ ನಡುರಾತ್ರಿಯ ಅವಧಿಯಲ್ಲಿ ಮತ್ತು 1ನೇ ಸಂಖ್ಯೆಯ ಆಪಾದಿತನ ಮನೆಯ ವರಾಂಡದಲ್ಲಿ ಆತ್ಮಹತ್ಯೆ ಮಾಡಿಕೊಂಡಿರುವಳು ಮತ್ತು ಆ ಮೂಲಕ ಮೃತ ಸಣ್ಣಮಾರಮ್ಮನು ಆತ್ಮಹತ್ಯೆ ಮಾಡಿಕೊಳ್ಳುವುದಕ್ಕೆ ಎಲ್ಲಾ ಆಪಾದಿತರು ದುಷ್ಪ್ರೇರಿಸಿರುವರು ಮತ್ತು ಆ ಮೂಲಕ ಭಾರತೀಯ ದಂಡ ಸಂಹಿತೆಯ 34ರೊಂದಿಗೆ ಓದಲಾದ 306ನೇ ಪ್ರಕರಣದ ಮೇರೆಗೆ ದಂಡಿಸಬಹುದಾದ ಅಪರಾಧವು ನಡೆದಿದೆ ಎಂಬ ಯುಕ್ತ ಸಂದೇಹದ ಮೇಲೆ ಪ್ರಾಸಿಕ್ಯೂಷನ್ನು ರುಜುವಾತುಪಡಿಸಿದೆಯೇ?*

*2. ಎಲ್ಲಾ ಆಪಾದಿತರು ಆತ್ಮಹತ್ಯೆ ಮಾಡಿಕೊಳ್ಳುವುದಕ್ಕೆ ದುಷ್ಪ್ರೇರಿಸಿರುವರೇ ಅಥವಾ ಯಾರೇ ಆಪಾದಿತನು ಮೃತ ಸಣ್ಣಮಾರಮ್ಮನು ಆತ್ಮಹತ್ಯೆ ಮಾಡಿಕೊಳ್ಳಲು ದುಷ್ಪ್ರೇರಿಸಿರುವರೇ ಎಂಬ ಎಲ್ಲಾ ಯುಕ್ತ ಸಂದೇಹದ ಮೇಲೆ ಪ್ರಾಸಿಕ್ಯೂಷನ್ನು ಮತ್ತೆ ರುಜುವಾತುಪಡಿಸಿದೆಯೇ?"*

ಅಧೀನ ನ್ಯಾಯಾಲಯುವು, ವಿವಾದಾಂಶ ಸಂ.1ಕ್ಕೆ ಭಾಗಶ:ವಾಗಿ ಸಕಾರಾತ್ಮಕವಾಗಿ ಮತ್ತು ವಿವಾದಾಂಶ ಸಂ.2ಕ್ಕೂ ಸಹ ಭಾಗಶಃವಾಗಿ ಸಕಾರಾತ್ಮಕವಾಗಿ ಅಭಿಪ್ರಾಯುವನ್ನು ವ್ಯಕ್ತಪಡಿಸಿದೆ. ಪ್ರಸ್ತುತ ವ್ಯವಹರಣೆಗಳಲ್ಲಿ ಇದು ಪ್ರಶ್ನಿಸುವಂಥದ್ದಾಗಿದೆ.

4. ಅಪೀಲುದಾರರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರು, ಭಾರತೀಯ ದಂಡ ಸಂಹಿತೆಯ 306ನೇ ಪ್ರಕರಣದ ಮೇರೆಗಿನ ಒಳಾಂಶಗಳನ್ನು ಗಮನದಲ್ಲಿಟ್ಟುಕೊಂಡು, ಆಪಾದಿತನು ಮಾಡಿದ ಆಪಾದಿತ ಅಪರಾಧವನ್ನು, ಭಾರತೀಯ ದಂಡ ಸಂಹಿತೆಯ 306ನೇ ಪ್ರಕರಣದ ಪರಿಭಾಷೆಯೊಳಗೆ ಮನೆಯೊಳಗೆ ತರಬಹುದಾಗಿದೆಯೇ ಎಂಬ ಪ್ರಶ್ನೆಯು ತಂತಾನೇ ಸಮರ್ಥನೀಯವಾಗಿಲ್ಲವೆಂದು ನೇರವಾಗಿ ನಿವೇದಿಸಿದ್ದಾರೆ. ಆದುದರಿಂದ, ಮಾನ್ಯ ವಕೀಲರು, ಅಪೀಲುದಾರರು ಚಿತಾವಣೆ ಮಾಡಿರುವರು ಎಂಬುದು ಅಧೀನ ನ್ಯಾಯಾಲಯಕ್ಕೆ ಕಂಡು ಬಂದಿರುವುದು ಸಣ್ಣಮಾರಮ್ಮ ಆತ್ಮಹತ್ಯೆಗೆ ದುಷ್ಪ್ರೇರಣೆಯಾಗಿದೆ ಎಂಬುದು ಸಮರ್ಥನೀಯವಾಗಿಲ್ಲವೆಂದು ನಿವೇದಿಸಿರುವರು.

ಮಾನ್ಯ ವಕೀಲರು, ತೀರ್ಪಿನ ಸಮರ್ಥನೀಯತೆಯ ಪ್ರಶ್ನೆಯನ್ನು ಕೋರಿರುವಲ್ಲಿನ ಇತರ ಆಧಾರಗಳನ್ನು ಸಹ ಎತ್ತಿದ್ದು, ಆದಾಗ್ಯೂ ಸದರಿ ಮೇಲಿನ ಪ್ರಾಥಮಿಕ ವಾದದ ಆಧಾರದ ಮೇಲೆ ನಿಂತಿರುವುದಕ್ಕೆ ಒತ್ತು ನೀಡಿರುವರು.

ಮಾನ್ಯ ವಕೀಲರು, ಮೇಲಿನ ವಾದವನ್ನು ಸಮರ್ಥಿಸುವಲ್ಲಿ ಕೆಲವು ಪ್ರಾಧಿಕಾರಗಳನ್ನು ಅವಲಂಬಿಸಿರುವುದನ್ನು ಕೋರಿದ್ದಾರೆ. ಆದುದರಿಂದ, ಅಪೀಲನ್ನು ಪುರಸ್ಕರಿಸಬೇಕೆಂದು ಮತ್ತು ಆಪಾದಿತನನ್ನು ಖುಲಾಸೆಗೊಳಿಸಬೇಕೆಂದು ವಿನಂತಿಸಲಾಗಿದೆ.

5. ಮಾನ್ಯ ರಾಜ್ಯ ಪಬ್ಲಿಕ್ ಪ್ರಾಸಿಕ್ಯೂಟರ್‌ರವರು, ಮತ್ತೊಂದು ಕಡೆ, ಅಧಿವಿಚಾರಣಾ ನ್ಯಾಯಾಲಯದ ತೀರ್ಪನ್ನು ಸಮರ್ಥಿಸಿಕೊಳ್ಳಲು ಕೋರಿದ್ದಾರೆ ಮತ್ತು ಅಪೀಲನ್ನು ವಜಾಗೊಳಿಸಲು ಕೋರಿದ್ದಾರೆ. ***ದಮ್ಮು ಶ್ರೀನು –ವಿರುದ್ಧ– ಆಂಧ್ರ ಪ್ರದೇಶ ರಾಜ್ಯ*** [1] ಪ್ರಕರಣದಲ್ಲಿನ ಸರ್ವೋಚ್ಛ ನ್ಯಾಯಾಲಯದ ತೀರ್ಪು ನಿರ್ದಿಷ್ಟ ಗಮನವನ್ನು ಸೆಳೆದಿದ್ದು, ಆಪಾದಿತನ ನಡವಳಿಕೆ ಮತ್ತು ಮೃತರು

1. 2009 (3) ಕ್ರೈಮ್ಸ್ 35(ಎಸ್‌ಸಿ)

ಆತ್ಮಹತ್ಯೆ ಮಾಡಿಕೊಳ್ಳುವುದರ ನಡುವೆ ಸ್ಪಷ್ಟ ಸಾಮೀಪ್ಯತೆ ಮತ್ತು ಸಂಬಂಧವಿತ್ತು ಎಂಬುದನ್ನು ಮಾತ್ರ ರುಜುವಾತುಪಡಿಸಬಹುದಾಗಿದ್ದರೆ, ಆತ್ಮಹತ್ಯೆಯನ್ನು ಮಾಡಿಕೊಳ್ಳಲು ಆಪಾದಿತನು ದುಷ್ಪ್ರೇರಿಸಿರುವ, ಭಾರತೀಯ ದಂಡ ಸಂಹಿತೆಯ ಪ್ರಕರಣದ ಮೇರೆಗೆ ದಂಡಿಸಬಹುದಾದ ಅಪರಾಧವಾಗಿದೆ ಎಂದು ನಿರ್ಣಯಿಸಿ, ಅಧಿವಿಚಾರಣೆ ನ್ಯಾಯಾಲಯವು ಇದನ್ನು ಅವಲಂಬಿಸಿ ಅನುಸರಿಸಿದೆ.

6. ನಮ್ಮ ಮುಂದಿರುವ ಪ್ರಸ್ತುತ ಪ್ರಕರಣದ ಸಂಗತಿಗಳು ಮತ್ತು ಸನ್ನಿವೇಶಗಳ ಬೆಳಕಿನಲ್ಲಿ, ಮೃತರು ಆತ್ಮಹತ್ಯೆಯನ್ನು ಮಾಡಿಕೊಳ್ಳುವುದಕ್ಕೆ ಕಾರಣವಾದ ಆಪಾದಿತನ ನಡವಳಿಕೆಯು ಅಂಥ ಆತ್ಮಹತ್ಯೆಯು ದುಷ್ಪ್ರೇರಣೆಯಾಗಿದೆಯೆಂದು ನಿರ್ಣಯಿಸಬಹುದಾಗಿದೆಯೇ ಎಂಬ ಪ್ರಶ್ನೆಗೆ, ಸರ್ವೋಚ್ಚ ನ್ಯಾಯಾಲಯವು ಮೇಲೆ ನಿರ್ಧರಿಸಿದ ಪ್ರಕರಣಕ್ಕೆ ಸಂಬಂಧಪಡುವುದಕ್ಕೆ ಮಾತ್ರ ಉತ್ತರಿಸಬೇಕಾಗುತ್ತದೆ. ಆದರೆ ಬೇರೆ ಬೇರೆ ಸನ್ನಿವೇಶಗಳ ಸಂಬಂಧದಲ್ಲಿ ಇತರ ತೀರ್ಪುಗಳನ್ನು ಸಹ ನೀಡಿದ್ದು, ಇದರಲ್ಲಿ ಆತ್ಮಹತ್ಯೆಯ ದುಷ್ಪ್ರೇರಣೆಯು ಪ್ರಮುಖ ಆಪಾದನೆಯಾಗಿತ್ತು. ***ಸ್ವಾಮಿ ಪ್ರಹಲ್ಲಾದಾಸ್ –ವಿರುದ್ಧ– ಮಧ್ಯ ಪ್ರದೇಶ ರಾಜ್ಯ*** [2] ಜಗಳದ ಸಂದರ್ಭದಲ್ಲಿ ಅಪೀಲುದಾರನು, ಮೃತರಿಗೆ 'ಹೋಗಿ, ಸಾಯಿ' ಎಂದು ಹೇಳುವ ತಪ್ಪನ್ನು ಮಾಡಿದದೆನ್ನುವ ಆಧಾರದ ಮೇಲೆ ಭಾರತೀಯ ದಂಡ ಸಂಹಿತೆಯ 306ನೇ ಪ್ರಕರಣದ ಮೇರೆಗಿನ ಅಪರಾಧವನ್ನು ಇದರಲ್ಲಿ ಮಾಡಿದ್ದು, ಅವಳಿಗೆ ಅದನ್ನು ಅನುಸರಿಸುವಂತೆ ಹೇಳಲಾಗಿದೆ. ಆದಾಗ್ಯೂ ಸರ್ವೋಚ್ಚ ನ್ಯಾಯಾಲಯವು, ಮೇಲೆ ಹೇಳಲಾದಂತೆ ಮೃತಳಿಗೆ ಆಪಾದಿತನು ಆ ಪದಗಳನಷ್ಟೆ ನುಡಿದಿರುವನೆಂದು ಅಭಿಪ್ರಾಯಪಟ್ಟಿದ್ದು, ಆತ್ಮಹತ್ಯೆ ಮಾಡಿಕೊಳ್ಳಲು ಮೃತಳನ್ನು ಚಿತಾವಣೆ ಮಾಡಿರುವುದಕ್ಕೆ ಸಾಕಷ್ಟು ಮೊದಲ ನೋಟದ ಸಾಕ್ಷ್ಯವಿರುವುದಿಲ್ಲ.

***ಮಹೇಂದ್ರ ಸಿಂಗ್ –ವಿರುದ್ಧ– ಮಧ್ಯ ಪ್ರದೇಶ ರಾಜ್ಯ*** [3] :

2. 1995 ಪೂರಕ (3) ಎಸ್‌ಸಿಸಿ 438 3. 1995 ಪೂರಕ (3) ಎಸ್‌ಸಿಸಿ 731

ಅಪೀಲುದಾರನು, ಭಾರತೀಯ ದಂಡ ಸಂಹಿತೆಯ 306ನೇ ಪ್ರಕರಣದ ಮೇರೆಗಿನ ಅಪರಾಧಕ್ಕಾಗಿ, ಈ ಮುಂದಿನಂತೆ ಇರುವ ಮೃತರ ಮರಣ ಹೇಳಿಕೆಯ ಆಧಾರದ ಮೇಲೆ ಪ್ರಮುಖವಾಗಿ ದೋಷಾರೋಪಣೆ ಮಾಡಲಾಗಿದ್ದು, ಅದು ಹೀಗಿದೆ:

> "ನನ್ನ ಅತ್ತೆ ಮತ್ತು ಪತಿ ಮತ್ತು ನಾದಿನಿ (ಪತಿಯ ಹಿರಿಯ ಅಣ್ಣನ ಪತ್ನಿ) ನನಗೆ ಕಿರುಕುಳ ನೀಡಿರುತ್ತಾರೆ. ಅವರು ನನ್ನನ್ನು ಹೊಡೆದು, ನಿಂದಿಸಿದರು. ನನ್ನ ಪತಿ ಮಹೇಂದ್ರ ಎರಡನೇ ಬಾರಿ ಮದುವೆಯಾಗಲು ಬಯಸಿದ್ದರು. ಅವನು ತನ್ನ ನಾದಿನಿಯೊಂದಿಗೆ ಅಕ್ರಮ ಸಂಬಂಧವನ್ನು ಹೊಂದಿದ್ದನು. ಈ ಎಲ್ಲಾ ಕಾರಣಗಳಿಂದಾಗಿ, ಕಿರುಕುಳ ನೀಡುತ್ತಿದ್ದು, ನಾನು ಬೆಂಕಿ ಹಚ್ಚಿಕೊಂಡು ಸಾಯಲು ಬಯಸಿರುತ್ತೇನೆ.

ಸರ್ವೋಚ್ಚ ನ್ಯಾಯಾಲಯವು, ಭಾರತೀಯ ದಂಡ ಸಂಹಿತೆಯ 107ನೇ ಪ್ರಕರಣದ ಮೇರೆಗೆ 'ದುಷ್ಪ್ರೇರಣೆ'ಯ ಪರಿಭಾಷೆಯನ್ನು ಪರಿಗಣಿಸುವಾಗ, ಭಾರತೀಯ ದಂಡ ಸಂಹಿತೆಯ 306ನೇ ಪ್ರಕರಣದ ಮೇರೆಗಿನ ಅಪರಾಧಕ್ಕಾಗಿ ಅಪೀಲುದಾರನ ದೋಷಾರೋಪ ಮತ್ತು ಅಪರಾಧ ನಿರ್ಣಯವನ್ನು ಮೃತಳಿಗೆ ಆದ ಕಿರುಕುಳದ ಆರೋಪದ ಮೇಲಷ್ಟೇ ಸಮರ್ಥಿಸಿಕೊಂಡಿಲ್ಲವೆಂಬುದು ಕಂಡು ಬರುತ್ತದೆ. ದುಷ್ಪ್ರೇರಣೆಯ ಒಳಾಂಶಗಳನ್ನು ಮೃತರ ಹೇಳಿಕೆಗೆ ಅನ್ವಯಿಸಲಾಗಿಲ್ಲವೆಂದೂ ಸಹ ಅಭಿಪ್ರಾಯಪಟ್ಟಿದೆ.

***ಕುಮಾರ್ –ವಿರುದ್ಧ– ರಮೇಶ್, ಛತ್ತೀಸ್‌ಗಢ ರಾಜ್ಯ*** [4] ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು, ಎಕ್ಸಿಕ್ಯೂಟಿವ್ ಮ್ಯಾಜಿಸ್ಟ್ರೇಟ್‌ರವರು ದಾಖಲಿಸಿದ ಮರಣೋತ್ತರ ಹೇಳಿಕೆಯ ಆಧಾರದ ಮೇಲೆ ಭಾರತೀಯ ದಂಡ ಸಂಹಿತೆಯ 306ನೇ ಪ್ರಕರಣದ

4. (2001) 9 ಎಸ್‌ಸಿಸಿ 618

ಮೇರೆಗೆ ರೂಪಿಸಲಾದ ಅಪರಾಧ ಮತ್ತು ಅಪರಾಧದ ಅಪರಾಧ ನಿರ್ಣಯವನ್ನು ಪರಿಗಣಿಸಿದ್ದು ಇದರಲ್ಲಿ, ಅವಳು, ತತ್ಪೂರ್ವದಲ್ಲಿ, ಮೃತರು ಮತ್ತು ಅವಳ ಪತಿಯೊಂದಿಗೆ ನಡೆದಿತ್ತೆಂದು ಹೇಳಿಕೆಯನ್ನು ನೀಡಿದ್ದು, ಅದು ನಡೆದ ದಿನದಂದು ಅವಳು ತನ್ನ ಪತಿಯೊಂದಿಗೆ ಜಗಳ ಮಾಡಿಕೊಂಡಿದ್ದು, ಅವನು, ನೀನು ಇಷ್ಟ ಬಂದ ಕಡೆಗೆ ಹೋಗು ಎಂದು ಅವನು ಹೇಳಿದ ನಂತರ ಅವಳು ತಾನೇ ಬೆಂಕಿ ಹಚ್ಚಿಕೊಂಡಿರುವಳು. ಸರ್ವೋಚ್ಚ ನ್ಯಾಯಾಲಯವು, ಆಪಾದಿತನನ್ನು ಖುಲಾಸೆಗೊಳಿಸುವಾಗ ಹೀಗೆ ಹೇಳಲಾಗಿತ್ತು.

> *"ಯುಕ್ತ ಕೋಪದ ಅಥವಾ ಉದ್ವೇಗದಲ್ಲಿ ನುಡಿದ ಪದ ಯಾವುದೇ ಚಿತಾವಣೆ ಹೊಂದಿರದ ವಾಸ್ತವಿಕವಾಗಿ ಸಂದರ್ಭಗಳನ್ನು ಪಾಲಿಸಲು ಚಿತಾವಣೆಯೆಂದು ಹೇಳಲಾಗುವುದಿಲ್ಲ. ಆತ್ಮಹತ್ಯೆಯನ್ನು ಮಾಡಿಕೊಳ್ಳುವ, ಸಂತ್ರಸ್ತರು ಸಾಮಾನ್ಯವಾಗಿ ಅತೀ ಸೂಕ್ಷ್ಮಮತಿಗಳಾಗಿರುವರು, ಮುಂಗೋಪಿಗಳಾಗಿರುವರು, ಕೌಟುಂಬಿಕ ಜೀವನದಲ್ಲಿ ಘರ್ಷಣೆ ಮತ್ತು ಭಿನ್ನಾಭಿಪ್ರಾಯಗಳು ಸಮಾಜದಲ್ಲಿ ಸಾಮಾನ್ಯವಾಗಿದ್ದು, ಇದಕ್ಕೆ ಸಂತ್ರಸ್ತರು ಸೇರಿದವರಾಗಿರುತ್ತಾರೆ ಮತ್ತು ಅಂಥ ಮುಂಗೋಪ, ಘರ್ಷಣೆ ಮತ್ತು ಭಿನ್ನಾಭಿಪ್ರಾಯಗಳು, ಆತ್ಮಹತ್ಯೆ ಮಾಡಿಕೊಳ್ಳಲು ಸಮಾಜ ನೀಡುವಲ್ಲಿ ಸದೃಶವಾಗಿ ಪ್ರತ್ಯೇಕ ಸನ್ನಿವೇಶಗಳನ್ನು ಪ್ರಚೋದಿಸುವವೆಂದು ಹೇಳಲಾಗುವುದಿಲ್ಲ, ಆತ್ಮಹತ್ಯೆಯ ಅಪರಾಧವನ್ನು ಪ್ರೇರೇಪಿಸುವ ದೋಷಾರೋಪದ ಆಪಾದಿತನು ತಪ್ಪಿತಸ್ಥನೆಂದು ಕಂಡು ಬರುವನೆಂಬ ನಿರ್ಣಯವನ್ನು ಆಧರಿಸುವುದಕ್ಕೆ ನ್ಯಾಯಾಲಯದ ಆತ್ಮಸಾಕ್ಷಿಯು ಒಪ್ಪುವುದಿಲ್ಲ."*

"ನ್ಯಾಯಾಲಯವು, "ಚಿತಾವಣೆ"ಯ ಅರ್ಥ ವ್ಯಾಪ್ತಿಯ ಬೇರೆ ಬೇರೆ ತೆರನಾದ ಅಲ್ಪ ವ್ಯತ್ಯಾಸಗಳನ್ನು ಸಹ ಪರಿಶೀಲಿಸಿದೆ. ಹೀಗಾಗಿ:

ವಾಸ್ತವಿಕ ಪದಗಳನ್ನು ಅದರ ಪರಿಣಾಮಕ್ಕಾಗಿ ಬಳಸಲೇಬೇಕು ಎಂಬ ಅಗತ್ಯವಿರದಿದ್ದರೂ, ಚಿತಾವಣೆಯ ಎಂಬ ಪದಗಳ ಅಗತ್ಯತೆಯನ್ನು ಒಳಗೊಳ್ಳುವ ಚಿತಾವಣೆಯು, ಕೃತ್ಯ ಎಸಗಲು ರೇಗಿಸುವುದು, ಬಲಾತ್ಕಾರವಾಗಿ ದೂಡುವುದು, ಪ್ರಚೋದಿಸುವುದು, ಚಿತಾವಣೆ ಮಾಡಿರುವುದು ಅಥವಾ ಪ್ರೋತ್ಸಾಹಿಸುವುದಾಗಿದೆ, ಅಥವಾ ಚಿತಾವಣೆಯು ಏನನ್ನು ತಿಳಿಸುತ್ತದೆ ಎಂಬ ಸನ್ನಿವೇಶವನ್ನು ಅಗತ್ಯವಾಗಿ ಮತ್ತು ನಿರ್ದಿಷ್ಟವಾಗಿ ಸೂಚಿಸುತ್ತದೆ. ಆದರೂ, ಸನ್ನಿವೇಶವನ್ನು ನಿಭಾಯಿಸಲು ಯುಕ್ತ ನಿಶ್ಚಿತತೆಯು ಅದನ್ನು ಹೇಳಲು ಸಮರ್ಥವಾಗಿರಲೇಬೇಕು.

***ಸಂಜು ಅಲಿಯಾಸ್ ಸಂಜಯ್ ಸಿಂಗ್ ಸೆಂಗರ್ -ವಿರುದ್ಧ- ಮಧ್ಯಪ್ರದೇಶ ರಾಜ್ಯ*** [5] ರಲ್ಲಿ, ಅಪೀಲುದಾರನ ತಂಗಿ, ನೀಲಂ 1993ನೇ ವರ್ಷದಲ್ಲಿ ಬಬ್ಲೂ ಎಂಬೊಬ್ಬರನ್ನು ವಿವಾಹವಾಗಿದ್ದಳು. ಪತಿಯ ಕುಟುಂಬದ ಸದಸ್ಯರು ಪ್ರಾರಂಭದಿಂದ ನೀಲಂಳನ್ನು ಕ್ರೌರ್ಯತೆಗೆ ಒಳಪಡಿಸಿದ್ದಾರೆ – ಅವಳು ತನ್ನ ಪತಿ ಮತ್ತು ಮಕ್ಕಳೊಂದಿಗೆ ಸುಮಾರು ಒಂದು ವರ್ಷ ಕಾಲ ಪ್ರತ್ಯೇಕವಾಗಿ ಬದುಕುವಂಥ ಪರಿಸ್ಥಿತಿಗೆ ನೂಕಿತ್ತು. ಅಪೀಲುದಾರನು ತನ್ನ ತಂಗಿಯನ್ನು ಹಿಂದಕ್ಕೆ ಕರೆದೊಯ್ದು ಅವಳನ್ನು ಸರಿಯಾಗಿ ನಡೆಸಿಕೊಳ್ಳಬೇಕೆಂದು ಅವಳು ಮರಣ ಹೊಂದುವುದಕ್ಕೆ ಸುಮಾರು ಎರಡು ತಿಂಗಳು ಮೊದಲು ಬಬ್ಲೂಗೆ ಸಲಹೆ ನೀಡಿದರೆಂದು ಹೇಳಲಾಗಿರುವ ಅವಳ ಸಹೋದರನೊಂದಿಗೆ ಆಶ್ರಯವನ್ನು ಕೋರಿಕೊಂಡಿದ್ದಾಳೆ. ಸಂಬಂಧಪಟ್ಟ ದಿನಾಂಕದಂದು, ಅಪೀಲುದಾರನು ಬಬ್ಲೂನ ತಂದೆ–ತಾಯಿಗಳನ್ನು ಸಂದರ್ಶಿಸಿ ತನ್ನ ತಂಗಿಯನ್ನೇನಾದರೂ ಕೆಟ್ಟದಾಗಿ ನಡೆಸಿಕೊಂಡರೆ ಕ್ರಿಮಿನಲ್ ವ್ಯವಹರಣೆಗಳು ಪ್ರಾರಂಭಿಸುವುದಾಗಿ ಒತ್ತಾಯಿಸಿ ಎಚ್ಚರಿಕೆಯನ್ನೂ ಸಹ ನೀಡಿದ್ದನೆಂದು ಹೇಳಲಾಗಿದೆ. ಮೃತರ ತಂದೆ–ತಾಯಿಗಳು ತಮ್ಮ ಮಗ ಪ್ರತ್ಯೇಕವಾಗಿ ವಾಸಿಸುತ್ತಿದ್ದುದರಿಂದ ತಮ್ಮ ಅಸಹಾಯಕತೆಯನ್ನು ತೋಡಿಕೊಂಡಿದ್ದರೆಂದು ಹೇಳಲಾಗಿದೆ.

ಆದಾಗ್ಯೂ, ಬಬ್ಲೂನ ತಾಯಿ ಅಪೀಲುದಾರನ ಕಾಳಜಿಯನ್ನು ಮತ್ತು ಕ್ರಿಮಿನಲ್ ವ್ಯವಹರಣೆಗಳನ್ನು ಪ್ರಾರಂಭಿಸುವ ಅವನ ಬೆದರಿಕೆಯನ್ನು ಬಬ್ಲೂಗೆ

5. ಎಐಆರ್ 2002 ಎಸ್‌ಸಿ 1998

ತಿಳಿಸಿರುವುದನ್ನು ಇದು ವ್ಯಕ್ತಪಡಿಸುತ್ತದೆ. ಬಬ್ಲೂ ಅಪೀಲುದಾರನ ಮನೆಗೆ ಹೋಗಿ ಅಲ್ಲಿ, ತನ್ನನ್ನು ಬೈದಿರುವರೆಂದು ಮತ್ತು ತನ್ನನ್ನು ದೂರ ಕಳಿಸುವರೆಂದು ಹೇಳಲಾಗಿರುವ ಅಪೀಲುದಾರನ ಕುಟುಂಬದೊಂದಿಗೆ ಜಗಳ ತೆಗೆದಿದ್ದಾನೆಂದು ಹೇಳಲಾಗಿದೆ. ಬಬ್ಲೂ ತನ್ನ ಸಹೋದರರಿಗೆ ಮತ್ತು ಪರಿಚಿತಸ್ಥರಿಗೆ ಇದನ್ನು ವರದಿ ಮಾಡಿರುವನೆಂದು ಹೇಳಲಾಗಿದ್ದು, ಆನಂತರ ಅವನು ತಾನೇ ನೇಣು ಬಿಗಿದುಕೊಂಡಿರುವುದು ಕಂಡುಬಂದಿತ್ತು. ಆತ್ಮಹತ್ಯೆ ಚೀಟಿಯು ಅವನ ದೇಹದ ಬದಿಯಲ್ಲಿ ಕಂಡು ಬಂದಿದೆಯೆಂದು ಹೇಳಲಾಗಿದೆ. ಮೃತ ಮತ್ತು ಅಪೀಲುದಾರನ ನಡುವಿನ ಜಗಳ ಮತ್ತು ಅಪೀಲುದಾರನು, ಅವನಿಗೆ 'ಹೋಗಿ ಸಾಯಿ' ಎಂದು ಹೇಳಿರುವುದು ಮೃತನು ಆತ್ಮಹತ್ಯೆ ಮಾಡಿಕೊಂಡಿರುವುದಕ್ಕೆ ನೇರ ಕಾರಣವಾಗಿದೆಯೆಂದು ಆಪಾದಿಸಲಾಗಿತ್ತು.

ಸರ್ವೋಚ್ಚ ನ್ಯಾಯಾಲಯವು, ಆದಾಗ್ಯೂ, ಮೇಲಿನ ಪರಿಣಾಮಕ್ಕೆ ಪ್ರಾಸಿಕ್ಯೂಷನ್‌ನ ವಾದವನ್ನು ಒಪ್ಪಿಕೊಳ್ಳಬಹುದಾಗಿದೆಯೆಂದು ಹೇಳಬಹುದಾದರೂ, 'ಚಿತಾವಣೆ'ಯ ವಿಷಯವನ್ನು ಇದು ಹುಟ್ಟುಹಾಕುವುದಿಲ್ಲವೆಂದು ಅಭಿಪ್ರಾಯಪಟ್ಟಿದೆ. 'ಚಿತಾವಣೆ' ಎಂಬ ಪದವು ಪ್ರಚೋದಿಸುವಿಕೆ ಅಥವಾ ತೀವ್ರತರವಾದುದನ್ನು ಏನಾದರೂ ಮಾಡಲು ಪ್ರೇರೇಪಿಸುತ್ತದೆ ಅಥವಾ ಸಲಹೆ ನೀಡಲು ಸಾಧ್ಯವಾಗದಿರುವ ಕಾರ್ಯವಾಗಿರುತ್ತದೆ ಅಥವಾ ಉದ್ರೇಕಿಸುತ್ತದೆ ಅಥವಾ ಚಿತಾಯಿಸುತ್ತದೆ. ಪ್ರಸ್ತುತ ಅಪರಾಧಿಕ ಮನಸ್ಸು, ಚಿತಾವಣೆಯ ಅಗತ್ಯ ಸಹಗಾಮಿಯಾಗಿದೆ. ಜಗಳದಲ್ಲಿ ಅಥವಾ ಕ್ಷಣದಲ್ಲಿ ಚುಚ್ಚಿದ ಮಾತನ್ನು ಅಪರಾಧಿಕ ಮನಸ್ಸಿನವರಿಗೆ ಹೇಳಲಾಗಿದೆಯೆಂದು ತೆಗೆದುಕೊಳ್ಳಲಾಗುವುದಿಲ್ಲ. ಇದು ಕೋಪದಲ್ಲಿ ಮತ್ತು ಭಾವಾವೇಗದಲ್ಲಿ ಆಗುತ್ತದೆ. ಅಲ್ಲದೆ, ಈ ಮಾತುಗಳನ್ನು, ಮೃತನು ಆತ್ಮಹತ್ಯೆ ಮಾಡಿಕೊಳ್ಳುವುದಕ್ಕೆ ಎರಡು ದಿನಗಳ ಮೊದಲು ಹೇಳಿರುವುದು ಎಂದು ಕಂಡು ಬಂದಿತ್ತು. ಹೀಗಾಗಿ, ಯಾವ ಸಮಯಕ್ಕೆ ಅಪರಾಧಿಕ ನುಡಿಯನ್ನು ಮೃತನಿಗೆ ಬಳಸಲಾಗಿತ್ತೋ ಆ ಸಮಯಕ್ಕೆ ಆತ್ಮಹತ್ಯೆಯು ನಿಕಟವಾಗಿರುವುದಿಲ್ಲವೆಂದು ಅಭಿಪ್ರಾಯಪಟ್ಟಿದೆ. ಆತ್ಮಹತ್ಯೆಯನ್ನು, ಜಗಳದ ನೇರ ಪರಿಣಾಮವಾಗಿರುವುದಿಲ್ಲವೆಂದು ಅಭಿಪ್ರಾಯಪಟ್ಟಿತ್ತು.

***ಚಿತ್ರೇಶ್ ಕುಮಾರ್ ಚೋಪ್ರಾ – ವಿರುದ್ಧ– ದೆಹಲಿಯ ಕೇಂದ್ರಾಡಳಿತ ರಾಜ್ಯ (ಎನ್‌ಸಿಟಿ)*** [6] ರ ಪ್ರಕರಣದಲ್ಲಿ ಸರ್ವೋಚ್ಛ ನ್ಯಾಯಾಲಯವು, ಪ್ರತಿಯೊಂದರ ಸೂಕ್ಷ್ಮತೆಯು ಪ್ರತ್ಯೇಕವಾಗಿ ಮತ್ತೊಂದರಿಂದ ವಿಭಿನ್ನವಾಗಿರುತ್ತವೆಯೆಂದು ಅಭಿಪ್ರಾಯಪಟ್ಟಿದೆ ಮತ್ತು ಚಿತಾವಣೆಯಲ್ಲಿ, ಪ್ರಚೋದಿಸುವ, ಚಿತಾಯಿಸುವ ಅಥವಾ ನಂತರ ಕೃತ್ಯವನ್ನು ಮಾಡುವುದನ್ನು ಪ್ರೇರೇಪಿಸಲೇಬೇಕು ಎಂದು ಅಭಿಪ್ರಾಯಪಟ್ಟಿದೆ. ಪ್ರತಿಯೊಬ್ಬ ವ್ಯಕ್ತಿಯ 'ಆತ್ಮಹತ್ಯಾ ಸಾಧ್ಯತೆಯ ವಿಧಾನ' (ಎಸ್‌ಐಸಿ) ಒಬ್ಬರಿಂದ ಮತ್ತೊಬ್ಬರಿಗೆ ಭಿನ್ನವಾಗಿರುತ್ತದೆ. ಪ್ರತಿಯೊಬ್ಬ ವ್ಯಕ್ತಿಯು ತನ್ನದೇ ಆದ ಸ್ವಾಭಿಮಾನವನ್ನು ಮತ್ತು ಆತ್ಮಗೌರವವನ್ನು ಹೊಂದಿರುತ್ತಾನೆ ಮತ್ತು ಅಂಥ ಸಂದರ್ಭಗಳನ್ನು ತಿಳಿಸುವಲ್ಲಿ ನಿರ್ಬಂಧಕ ಸೂತ್ರವನ್ನು ವಿಧಿಸುವುದು ಅಸಾಧ್ಯವೆಂದು ಅಭಿಪ್ರಾಯಪಡಲಾಗಿದೆ.

***ಗಂಗೂಲ ಮೋಹನ್ ರೆಡ್ಡಿ –ವಿರುದ್ಧ– ಆಂಧ್ರ ಪ್ರದೇಶ ರಾಜ್ಯ*** [7] ರಲ್ಲಿ, ಕಾನೂನಿನ ಉದ್ದೇಶ ಮತ್ತು ಪ್ರಕರಣಗಳ ಅನುಪಾತವನ್ನು, ಸರ್ವೋಚ್ಛ ನ್ಯಾಯಾಲಯವು ನಿರ್ಧರಿಸಿದ್ದು, ಭಾರತೀಯ ದಂಡ ಸಂಹಿತೆಯ 306ನೇ ಪ್ರಕರಣದ ಮೇರೆಗೆ ವ್ಯಕ್ತಿಯ ಅಪರಾಧ ನಿರ್ಣಯ ಮಾಡುವ ಸಲುವಾಗಿ, ಅಪರಾಧವನ್ನು ಮಾಡಲು ಸ್ಪಷ್ಟ ಅಪರಾಧಿಕ ಮನಸ್ಸು ಇರಬೇಕಾಗುತ್ತದೆಯೆಂಬುದನ್ನು ಸ್ಪಷ್ಟವಾಗಿ ಸೂಚಿಸಿದೆ.

ಇದು ಸಕ್ರಿಯ ಕೃತ್ಯ ಅಥವಾ ನೇರ ಕೃತ್ಯವನ್ನು ಅಗತ್ಯಪಡಿಸಿದ್ದು, ಇದು ಯಾವುದೇ ಆಯ್ಕೆ ಕಾಣದಿದ್ದು, ಮೃತನು ಆತ್ಮಹತ್ಯೆಯನ್ನು ಮಾಡಿಕೊಳ್ಳಲು ಕಾರಣವಾಗುತ್ತದೆ ಮತ್ತು ಮೃತನು ಆತ್ಮಹತ್ಯೆಯನ್ನು ಮಾಡಿಕೊಳ್ಳುವ ಅಂಥ ಸ್ಥಿತಿಗೆ ಅವನನ್ನು ನೂಕಲು ಕೃತ್ಯ ಉದ್ದೇಶಿಸಲೇಬೇಕು. ಭಾರತೀಯ ದಂಡ ಸಂಹಿತೆಯ 306ನೇ ಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧಕ್ಕಾಗಿ ಆಪಾದಿತನ ವಿರುದ್ಧದ ಆರೋಪವನ್ನು ಮನಗಾಣಿಸುವ ಸಲುವಾಗಿ, ಆಪಾದಿತನು ತನ್ನ ಕೃತ್ಯದ ಮೂಲಕ, ಪರೋಕ್ಷವಾಗಿಯೂ ಮೃತರು ಆತ್ಮಹತ್ಯೆ ಮಾಡಿಕೊಳ್ಳಲು

6. 2009(11) ಎಸ್‌ಸಿಎಎಲ್‌ಇ 24    7. 2010, ಎಐಆರ್ ಎಸ್‌ಸಿಡಬ್ಲ್ಯೂ 337

ಚಿತಾವಣೆ ಮಾಡಿರುವನೆಂಬುದನ್ನು ಅಥವಾ ಪ್ರಚೋದಿಸಿರುವನೆಂಬುದನ್ನು ತೋರಿಸಲೇಬೇಕು ಎಂಬುದು ಮೇಲಿನ ನಿರ್ಣಯುಗಳಲ್ಲಿ ಸಮಂಜಸ ದೃಷ್ಟಿಕೋನವಾಗಿದೆ ಅಥವಾ ಮೃತನು ಆತ್ಮಹತ್ಯೆಯನ್ನು ಮಾಡಿಕೊಳ್ಳುವುದಕ್ಕೆ ಅವಕಾಶವಾಗಿದೆಯೆನ್ನುವ ಕೆಲಸವನ್ನು ಅವನು ಮಾಡಿರುವುದನ್ನು ತೋರಿಸಬೇಕು.

***ದಮ್ಮು ಶ್ರೀನು*** ರವರ ಪ್ರಕರಣದಲ್ಲಿ, ಸರ್ವೋಚ್ಛ ನ್ಯಾಯಾಲಯವು ನಿರ್ದಿಷ್ಟ ಪ್ರಕರಣದ ಸಂಗತಿಗಳಿಗೆ ಸಂಬಂಧಪಟ್ಟಂತೆ ತನ್ನ ಅಭಿಪ್ರಾಯವನ್ನು ಎಂದರೆ, 1ನೇ ಸಂಖ್ಯೆಯ ಆಪಾದಿತನು ಮೃತರು ಮದುವೆಯಾಗಿದ್ದ 2ನೇ ಸಂಖ್ಯೆಯ ಆಪಾದಿತರೊಂದಿಗೆ ಅಕ್ರಮ ಸಂಬಂಧವನ್ನು ಬೆಳೆಸಿಕೊಂಡಿದ್ದರು ಎಂದು ಅಭಿಪ್ರಾಯಪಟ್ಟಿದೆ. 1ನೇ ಸಂಖ್ಯೆಯ ಆಪಾದಿತನು, ಮೃತರ ಕುಟುಂಬದ ಸದಸ್ಯರೊಂದಿಗೆ ನಾಚಿಕೆ ಬಿಟ್ಟು ಸಂಬಂಧವನ್ನು ತೋರಿಸಿದ್ದು, ಅವಳನ್ನು ಸಮಾಲೋಚನೆಗೆ ಕಳುಹಿಸಿರುವಾಗ, ಅವಳ ತಂದೆಯ ಸ್ವಂತ ಮನೆಗೆ 2ನೇ ಸಂಖ್ಯೆಯ ಆಪಾದಿತನನ್ನು ಕರೆದೊಯ್ದಿದ್ದು, ಸುಮಾರು ದಿನಗಳ ನಂತರ ಅವಳನ್ನು ಹಿಂದಕ್ಕೆ ಕರೆತರಲಾಗಿದೆಯೆಂದು ಹೇಳಲಾಗಿದೆ. ಮೃತರು ಈ ಅವಮಾನವನ್ನು ಮತ್ತು ತೇಜೋವಧೆಯನ್ನು ಸಹಿಸಿಕೊಳ್ಳುವುದು ಅಸಾಧ್ಯವಾಗಿದ್ದು, ಹಿಂದೆ ಸೂಚಿಸಲಾದ ಕಥೆಯ ಪಾಠದ ಆಧಾರದ ಮೇಲೆ ಅವನ ಕುಟುಂಬದ ಇತರ ಸದಸ್ಯರಿಗೆ ಅವನ ಯಾತನೆ ಮತ್ತು ಅಸಹಾಯಕತೆಯನ್ನು ವ್ಯಕ್ತಪಡಿಸಿದ ನಂತರ ಆತ್ಮಹತ್ಯೆಯನ್ನು ಮಾಡಿಕೊಂಡಳೆಂದು ಹೇಳಲಾಗಿದೆ.

7. ಮತ್ತೊಂದು ಕಡೆ, ಈ ಪ್ರಕರಣದಲ್ಲಿ ಅಧಿ ವಿಚಾರಣಾ ನ್ಯಾಯಾಲಯವು ಸದರಿ ನಿರ್ಣಯವನ್ನು ಅನ್ವಯಿಸಿದ್ದು ಈ ಪ್ರಕರಣವು ಸದೃಶವಾದ ದೃಷ್ಟಿಕೋನವನ್ನು ತಳೆಯಲಾಗಿದೆಯೆಂದು ಅಭಿಪ್ರಾಯಪಟ್ಟಿದ್ದು, ಮತ್ತೊಂದು ಕಡೆ ಮೇಲೆ ಉದ್ಧೃತಗೊಳಿಸಲಾದ ಎಲ್ಲಾ ನಿರ್ಣಯಗಳನ್ನು ನಿರ್ಲಕ್ಷಿಸುವುದು ಅಗತ್ಯವಾಗಿದೆಯೆಂದು ಅಭಿಪ್ರಾಯಪಟ್ಟಿದೆ.

ಮತ್ತೊಂದು ಕಡೆ ಅವಳ ಮದುವೆ ಒತ್ತಾಯಪಡಿಸಲು ಮತ್ತು ತ್ವರಿತಗೊಳಿಸಲು ಆಪಾದಿತನ ಮನೆಯ ವರಾಂಡದಲ್ಲಿ ಉಳಿಯಲು ಮೃತರು ಆಯ್ಕೆ ಮಾಡಿಕೊಂಡಾಗ, 1ನೇ ಸಂಖ್ಯೆಯ ಅಪೀಲುದಾರನು ಗ್ರಾಮದಲ್ಲಿರಲಿಲ್ಲದಿರುವುದು ಮತ್ತು ಕಾಣೆಯಾಗಿರುವುದು ಕಂಡುಬಂದಿದೆ. ಎರಡನೇ ಅಪೀಲುದಾರನಿಗೆ ಸಂಬಂಧಿಸಿದ ಪಾತ್ರಕ್ಕೆ ಅನ್ವಯಿಸುವಷ್ಟರ ಮಟ್ಟಿಗೆ, ಅವಳನ್ನು ನಿಂದಿಸಿ ಮನೆಯಿಂದ ಹೊರನೂಕುವಲ್ಲಿ 1ನೇ ಅಪೀಲುದಾರನ ಕುಟುಂಬದ ಇತರ ಸದಸ್ಯರುಗಳಲ್ಲದೆ, ಇವನು ನಿರ್ದಿಷ್ಟವಾಗಿ ಹಿಂಸಾತ್ಮಕ ಮತ್ತು ನಿಂದನೆಯನ್ನು ಮಾಡಿದ್ದನೆಂಬುದಾಗಿದೆ. ಅಪೀಲುದಾರರ ಸದರಿ ಕೃತ್ಯಗಳು ಅಥವಾ ನಡತೆಯನ್ನು ಭಾರತೀಯ ದಂಡ ಸಂಹಿತೆಯ 306ನೇ ಪ್ರಕರಣದ ಮೇರೆಗೆ ದಂಡನೀಯ ಅಪರಾಧವನ್ನು ಮಾಡಿರುವುದಕ್ಕೆ ಸಾಕಷ್ಟು ಇವೆಯೆಂದು ಅಭಿಪ್ರಾಯಪಡಲು ಸಾಧ್ಯವಿಲ್ಲ. ತತ್ಪರಿಣಾಮವಾಗಿ ಅಧೀನ ನ್ಯಾಯಾಲಯದ ತೀರ್ಪು ಸಮರ್ಥನೀಯವಾಗಿರುವುದಿಲ್ಲ.

ಅಪೀಲನ್ನು ಪುರಸ್ಕರಿಸಲಾಗಿದೆ. ಅಧೀನ ನ್ಯಾಯಾಲಯದ ತೀರ್ಪನ್ನು ತಳ್ಳಿಹಾಕಲಾಗಿದ್ದು, ಆಪಾದಿತನನ್ನು ಖುಲಾಸೆಗೊಳಿಸಲಾಗಿದೆ. ಜುಲ್ಮಾನೆ ಮೊತ್ತ ಏನಾದರೂ ಇದ್ದರೆ, ಅದನ್ನು ಹಿಂದಿರುಗಿಸತಕ್ಕದ್ದು. ಆಪಾದಿತನು ನೀಡಿದ ಜಾಮೀನು ಪತ್ರವನ್ನು ರದ್ದುಗೊಳಿಸಲಾಗಿದೆ.